

ಅವರು ಹೇಳುವುದರಲ್ಲಿಯೂ ನ್ಯಾಯವಿದೆ. ಪೇಟೆಯಲ್ಲಿ ದೊಡ್ಡ ದೊಡ್ಡ ಅಂಗಡಿಗಳ ಮುಂದಿರುವ ಸ್ಥಳಗಳನ್ನೆಲ್ಲ ಅಂಗಡಿಗಳ ಮಾಲೀಕರ ಕಾರುಗಳೇ ಆಕ್ರಮಿಸಿ, ಬೆಳಿಗ್ಗೆ ಅಂಗಡಿ ಶುರುವಾದಾಗಿನಿಂದ ಹಿಡಿದು ರಾತ್ರಿ ಮುಚ್ಚುವವರೆಗೂ ಗೂಟ ಬಡಿದುಕೊಂಡು ನಿಂತಿರುತ್ತವೆ. ಅದರ ನಡುವೆ ಎಲ್ಲೋ ಆಗೊಮ್ಮೆ ಈಗೊಮ್ಮೆ ನಮ್ಮ ವಾಹನಕ್ಕೆ ಪಾರ್ಕಿಂಗ್ ಸಿಕ್ಕು, ಖುಷ್ ಖುಷಿಯಿಂದ ಉಸ್ಸಪ್ಪಾ ಎಂದು ಪಾರ್ಕಿಂಗ್ ಮಾಡಿ ಮಾರ್ಕೆಟ್ ಸುತ್ತಿ ಬರುವಷ್ಟರಲ್ಲಿ, ನಮ್ಮ ಕಾರಿನ ಹಿಂದೆ 'ಟಿ' ಆಕಾರದಂತೆ ಅಡ್ಡಲಾಗಿ ಮತ್ಯಾರೋ ಕಾರು ಪಾರ್ಕಿಂಗ್ ಮಾಡಿ ಹೋಗಿರುತ್ತಾರೆ. ಶಾಪಿಂಗ್ ಬೇಗ ಮಾಡಿದ ಖುಷಿಯೆಲ್ಲ ಜರ್ರನೆ ಇಳಿದು ಹೋಗಿರುತ್ತದೆ.

ಜೋಲು ಮುಖದಲ್ಲಿ, ಆ ಕಾರಿನವರು ಕೆಲಸ ಮುಗಿಸಿ ಬರುವ ತನಕ ಕಾದು ಕೂತು, ಬಂದ ಮೇಲೆ ಅವರ ಜೊತೆ ಒಂದಿಷ್ಟು ಬಾಯಿಮಾತಿನ ಶರಂಪರ ಜಗಳಗಳು ನಡೆದು ಅದೇನೋ ಹೇಳುತ್ತಾರಲ್ಲ 'ಅತ್ತೆ ಮೇಲಿನ ಕೋಪ, ತೊತ್ತಿನ ಮೇಲೆ' ಎನ್ನುವಂತೆ ಕಿತ್ತಾಡಿ ಹೊರ ಬರುವಷ್ಟರಲ್ಲಿ ತಾಳ್ಮೆ ಮೀರಿ ಕಾರೊಳಗೆ ಕುಳಿತ ಗಂಡ ಹೆಂಡತಿಯ ನಡುವೆ ಕದನ ಶುರುವಿಕ್ಕಿಕೊಳ್ಳುತ್ತದೆ.

ಕೆಲವೊಂದು ಅಂಗಡಿಯವರು 'ಅಂಗಡಿ ಮುಂದೆ ವಾಹನ ನಿಲ್ಲಿಸಬೇಡಿ' ಎಂದು ನಾಯಿಗೆ ಬಡಿಗೆ ತೋರಿಸಿ ಹೆದರಿಸುವಂತೆ ಗದರಿಬಿಡುತ್ತಾರೆ. 'ಉಪ್ಪಮ್ಮ ಉಪ್ಪು, ಆಮನೆ ಸೊಪ್ಪು' ಎಂಬಂತೆ ಅಲ್ಲಿಂದಿಲ್ಲಿಗೆ ಎಡತಾಕಬೇಕು. ಕೆಲವು ಕಡೆ ಅವರ ಅಂಗಡಿಯಲ್ಲಿ ಏನಾದರೂ ಚೂರುಪಾರು ತಲೆಸವರಿದಂತೆ ವ್ಯಾಪಾರ ಮಾಡಿ, ದೇವಸ್ಥಾನಗಳ ಮುಂದೆ ತಳ್ಳುಗಾಡಿಗಳಲ್ಲೋ, ಬುಟ್ಟಿ ಹಿಡಿದು ಕೂತವರಲ್ಲೋ ಐದು ರೂಪಾಯಿ ವ್ಯಾಪಾರ ಮಾಡಿ ಐದು ಜೋಡಿ ಚಪ್ಪಲಿ ಅವರ ಕಾವಲಿಗೆ ಬಿಟ್ಟು ಹೋಗುವಂತೆ ಕಾರು ಬಿಟ್ಟು ಹೋಗಬೇಕು.

ದೊಡ್ಡ ದೊಡ್ಡ ಮಾಲ್‌ಗಳಿಗೆ, ಆಸ್ಪತ್ರೆಗಳಿಗೆ, ಹೋಟೆಲ್, ಮದುವೆ ಛತ್ರಗಳಿಗೆ ಹೋದರೆ ಮತ್ತೊಂದು ರೀತಿಯ ಕಥೆ. ಕೆಲವು ಕಡೆ ವಾಹನ ನಿಲ್ಲಿಸಲು ಸ್ಥಳವಿಲ್ಲದೆ ಒದ್ದಾಡಿದರೆ, ಮತ್ತೆ ಕೆಲವು ಕಡೆ ಪಾರ್ಕಿಂಗ್‌ಗಾಗಿ ವಿಶಾಲ ಸ್ಥಳಗಳಿರುತ್ತವೆ. ಅಲ್ಲಿಗೆ ಹೋಗಲು ಮಾರ್ಗದರ್ಶನ ಮಾಡಲು ನಾಲ್ಕಾರು ವಾಚ್‌ಮನ್‌ಗಳು ಪೀಪಿ ಊದುತ್ತಾ ಕೈ ತೋರಿಸುತ್ತಿರುತ್ತಾರೆ. ಪತ್ರಿಕೆಗಳಲ್ಲಿ ಇಲಿಗೆ ಬೋಂಡಾ ತಿನ್ನಲು ದಾರಿ ತೋರಿಸಿ ಎಂದು ಚಿತ್ರ ಕೊಟ್ಟಿರುವಂತೆ, ಅಲ್ಲಿ ಇಲ್ಲಿ ಹೋಗಿ ಕೊನೆಗೆ ಸ್ಥಳ ಸಿಕ್ಕು ನಿಲ್ಲಿಸಿ ಬರುವಾಗಲೇ ಗೊತ್ತಾಗುವುದು ನಮ್ಮ ಗಮ್ಯಸ್ಥಳಕ್ಕೆ ಹೋಗಲು ಕನಿಷ್ಠ ಅರ್ಧ ಕಿಲೋ ಮೀಟರ್ ಆದರೂ ನಡೆಯಬೇಕೆಂಬುದು. ಕೆಲಸ ಮುಗಿದ ಬಳಿಕ ನಮ್ಮ ಕಾರನ್ನು ನಾವೇ ಹುಡುಕುವ ಪರಿಸ್ಥಿತಿ.

ಮುಂಚೆ ಇಷ್ಟೆಲ್ಲ ಪಾರ್ಕಿಂಗ್ ಸಮಸ್ಯೆಯೇ ಇರಲಿಲ್ಲ. ಮೊದಲನೆಯದಾಗಿ ಕಾರು ಎನ್ನುವುದು ಎಲ್ಲ ವರ್ಗದವರಿಗೂ ಎಟಕುವ ಹಾಗಿರಲಿಲ್ಲ. ಹಳ್ಳಿಗಳಲ್ಲಿ ಬಿಡಿ, ವಿಶಾಲವಾದ ಮನೆಯಂಗಳದಲ್ಲಿ ನಾಲ್ಕೈದು ಚಕ್ಕಡಿಗಾಡಿ, ಟ್ರ್ಯಾಕ್ಟರ್‌ಗಳನ್ನು ಆರಾಮವಾಗಿ ನಿಲ್ಲಿಸುತ್ತಿದ್ದರು. ಆದರೆ ನಗರಗಳಲ್ಲಿ ಹಾಗಲ್ಲ. ಯಾರೇ ಮನೆ ಕಟ್ಟಿಸಿದರೂ ಕಾರಿಗೆ ಪಾರ್ಕಿಂಗ್ ಸ್ಥಳ ಬಿಡುತ್ತಿದ್ದುದು ಕಡಿಮೆ. ಮನೆಯಲ್ಲಿದ್ದ ಒಂದು ಹೀರೊ ಸೈಕಲ್ಲನ್ನೇ ಕಾರಿಗಿಂತ ಹೆಚ್ಚಾಗಿ ಸಂಕ್ರಾಂತಿ ಸುಗ್ಗಿಯಲ್ಲಿ ಎತ್ತುಗಳಿಗೆ ಬಣ್ಣಬಣ್ಣದ ಅಲಂಕಾರ ಮಾಡುವ ಹಾಗೆ ಮಾಡಿಟ್ಟುಕೊಳ್ಳುತ್ತಿದ್ದರು. ಅದಕ್ಕೆ ಸ್ಟ್ಯಾಂಡ್ ಇರದಿದ್ದರೆ ಮನೆಯ ಸಂದಿಯಲ್ಲಿ ಗೋಡೆಗೆ ಒರಗಿಸಿ, ಅಕಸ್ಮಾತ್ ಒಳ್ಳೆಯ ಕಂಡೀಷನ್ನಿನಲ್ಲಿ ಇದ್ದರೆ ಮನೆಯ ಮುಂದೆ ಮೆಟ್ಟಿಲುಗಳ ನಡುವೆ ಇರುತ್ತಿದ್ದ ಜಾರುಬಂಡಿ ಮೂಲಕ ಏರಿಸಿ ಮನೆಯ ಪಡಸಾಲೆಯಲ್ಲಿ ನಿಲ್ಲಿಸಿ ನೆಮ್ಮದಿಯಾಗಿದ್ದರು. ಲೂನಾ ಮತ್ತು ಸ್ಕೂಟರ್‌ಗೆ ಕೂಡ ಅದೇ ಮರ್ಯಾದೆಯೇ.

ಕಾರುಗಳು ನಿಧಾನವಾಗಿ ಮನೆಮನೆಗಳಿಗೆ ಯಾವಾಗ ಕಾಲಿಡಲು ಶುರು ಮಾಡಿದವೋ, ಅಲ್ಲಿಂದಲೇ ನೋಡಿ ಫಜೀತಿ ಶುರುವಾಗಿದ್ದು. ಚಿಕ್ಕ ಕಾರಿಗಾಗುವಷ್ಟು ಲೆಕ್ಕ ಹಾಕಿ ಸ್ಥಳ ಬಿಟ್ಟು ಮನೆ ಕಟ್ಟಿ, ನಂತರ ದೊಡ್ಡ ಕಾರುಗಳನ್ನು ಕೊಂಡಾಗ ಪೇಚಾಟ. ಅವರ ಮನೆ ಮುಂದಿಟ್ಟರೂ ಜಗಳ, ಇವರ ಮನೆ ಮುಂದಿಟ್ಟರೂ ಜಗಳ. ಕಾಂಪೌಂಡ್ ಒಳಗೆ ಹಿಡಿಸದಿದ್ದರೆ ಗೇಟನ್ನೇ ಫೋಲ್ಡೆಬಲ್ ಮಾಡಿಸಿ, ಕಾರಿನ ಅಳತೆಗೆ ತಕ್ಕಂತೆ ಮಾಡಿಫಿಕೇಷನ್ ಮಾಡಿಸುವುದು. ಬಯಲು ಶೌಚಾಲಯಕ್ಕೆ ಖಾಲಿ ಜಾಗ ಹುಡುಕಿಕೊಂಡು ಹೋಗುವ ಹಾಗೆ ಪಾರ್ಕಿಂಗ್‌ಗಾಗಿ ಜಾಗ ಹುಡುಕುವುದು, ಪರಿಚಯಸ್ಥರ ಮನೆಗಳ ಮುಂದೆ ನಿಲ್ಲಿಸುವುದು, ಸ್ವಲ್ಪ ದಿನದ ನಂತರ ಅವರು ಮುಖ ಸೊಟ್ಟ ಮಾಡಿದಾಗ ಅಥವಾ ನಿಲ್ಲಿಸಿರುವವರ ವಾಹನವನ್ನೇ ಬಳಕೆಗೆ ಕೇಳುವ ಅಪಾಯವಿರುವುದರಿಂದ ಮತ್ತೆ ಬೇರೆ ಕಡೆ ಹುಡುಕುವುದು, ಶೆಡ್‌ಗಳನ್ನು ಬಾಡಿಗೆ ಪಡೆಯುವುದು ಹೀಗೆ ನಾನಾ ವಿಧಾನಗಳ ಮೊರೆ ಹೋಗಬೇಕಾಗುತ್ತದೆ.

ಕೆಲವರ ಮನೆಗಳಲ್ಲಿ ಎರಡೆರಡು ಕಾರು, ಎರಡೆರಡು ಸ್ಕೂಟಿ–ಬೈಕು, ಹೀಗೆ ಅಂಗಳದ ತುಂಬೆಲ್ಲ ಕಸ ಹೊಡೆಯಲೂ ಸ್ಥಳವಿಲ್ಲದೆ ಇವುಗಳದ್ದೇ ಕಾರುಬಾರು. ಅವುಗಳನ್ನು ದಾಟಿಕೊಂಡು ಗೇಟಿನ ಬಳಿ ಹೋಗುವುದಕ್ಕೂ ಸರ್ಕಸ್ ಮಾಡಬೇಕು. ಮನೆಯ ಮುಂದೆ ಗೇಟಿನ ಪಕ್ಕದ ಸ್ಥಳವನ್ನು ಚೊಕ್ಕಟಗೊಳಿಸಿ ಕಾರು ನಿಲ್ಲಿಸಲು ಅನುಕೂಲ ಮಾಡಿಕೊಳ್ಳುತ್ತಿದ್ದಂತೆ ಮತ್ತೊಂದು ರೀತಿಯ ಪೇಚಾಟ. ನಮ್ಮ ಕಾರನ್ನು ತೆಗೆದುಕೊಂಡು ಹೋಗುತ್ತಿದ್ದಂತೆ ಮತ್ಯಾರೋ ಕಾರನ್ನು ಆ ಸ್ಥಳಕ್ಕೆ ತಂದು ನಿಲ್ಲಿಸಿಬಿಡುತ್ತಾರೆ. ಕೇಳಿದರೆ ಮುನಿಸಿಪಾಲಿಟಿ ಜಾಗದಲ್ಲಿ ನಿಲ್ಲಿಸಿದ್ದೀವಿ ಎನ್ನುವ ಉತ್ತರ ರೆಡಿಯಾಗಿರುತ್ತದೆ. ಇದಕ್ಕೆ ಪರಿಹಾರವಾಗಿ ಕಾರು ಹೊರಡುತ್ತಿದ್ದಂತೆ, ತಮ್ಮದೊಂದು ಬೈಕನ್ನೋ, ಸ್ಕೂಟಿಯನ್ನೋ ಮಧ್ಯದಲ್ಲಿ ನಿಲ್ಲಿಸಿಬಿಡುವುದು ಬಹಳಷ್ಟು ಜನರು ಕಂಡುಕೊಂಡಿರುವ ಪರಿಹಾರ.

ಕ್ಲಿನಿಕ್, ಆಫೀಸು, ದೊಡ್ಡ ದೊಡ್ಡ ಅಧಿಕಾರಿಗಳು ವಾಸಿಸುವ ಏರಿಯಾಗಳಲ್ಲಿ ಹಾಗೂ ಮುಖ್ಯರಸ್ತೆಗಳಲ್ಲಿ ಮನೆ ಕಟ್ಟಿಸಿಕೊಂಡಿರುವವರು, ಹೆಚ್ಚೂಕಡಿಮೆ ಎಲ್ಲರ ಗೇಟಿನ ಮುಂದಿನ ಪಾರ್ಕಿಂಗ್ ಸ್ಥಳ ಮುಂಜಾನೆಯಿಂದ ಸಂಜೆಯವರೆಗೂ, ಅವರ ವಾಹನಗಳಿಗೇ ನಿಲ್ಲಿಸಲು ಅವಕಾಶವಿಲ್ಲದೆ ಆಕ್ರಮಿಸಲ್ಪಟ್ಟಿರುತ್ತದೆ. 'ನೋ ಪಾರ್ಕಿಂಗ್' ಬೋರ್ಡ್ ನಾಮ್ ಕೆ ವಾಸ್ತೇ ನೇತು ಹಾಕಬೇಕಷ್ಟೇ. ಗೇಟಿನ ಮುಂದಿನ ಜಾಗ ನಮ್ಮದಲ್ಲ ಎಂದುಕೊಂಡು ಸುಮ್ಮನಿರುವುದೇ ವಾಸಿ. ಇನ್ನು ಕೆಲವು ಮಹಾನಗರಗಳಲ್ಲಿ ನಿಲುಗಡೆ ನಿಷೇಧವಿರುವ ಕಡೆ ನಿಲ್ಲಿಸಿ, ಅವುಗಳನ್ನು ಟೋಯಿಂಗ್ ಗಾಡಿಗಳು ಎಳೆದುಕೊಂಡು ಹೋಗುವುದೇನೋ ದಿಟವೇ. ಹೀಗೆ ಎಳೆದುಕೊಂಡು ಹೋದ ವಾಹನಗಳನ್ನು ಪಾರ್ಕಿಂಗ್ ಮಾಡಲು ಸ್ಥಳವಿಲ್ಲದೇ ಒದ್ದಾಡುವುದೂ ಇದೆಯಂತೆ.

ಎಂತೆಂತಹ ವಿಚಿತ್ರ ಜನರಿರುತ್ತಾರೆಂದರೆ, ಪಾರ್ಕಿಂಗ್‌ಗೆ ಜಾಗ ಇಲ್ಲದಿರುವ ಕಡೆ, 'ಸರ್ಕಾರಕ್ಕೆ ಇಷ್ಟೂ ಸೌಲಭ್ಯ ಮಾಡುವುದಕ್ಕೆ ಆಗುವುದಿಲ್ಲ' ಎಂದೆಲ್ಲಾ ಬಾಯಿಗೆ ಬಂದಂತೆ ಹೇಳುತ್ತಿರುತ್ತಾರೆ. ಅದೇ ಕೆಲವು ಕಡೆ ವ್ಯವಸ್ಥಿತವಾಗಿ ಹಣ ಪಾವತಿಸಿ ಪಾರ್ಕಿಂಗ್ ಮಾಡುವ ವ್ಯವಸ್ಥೆ ಇದ್ದರೂ, ಹಣ ಕೊಡಬೇಕಲ್ಲ ಎಂದು ಅರ್ಧ ಕಿಲೋ ಮೀಟರ್ ಹಿಂದೆಯೇ ವಾಹನಗಳನ್ನು ನಿಲ್ಲಿಸಿ ಬರುವವರಿದ್ದಾರೆ. ಕೆಲವು ಮಹಾನಗರ ಹಾಗೂ ವಿದೇಶಗಳಲ್ಲಿ ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆಗಳು ರೂಪುಗೊಂಡಿವೆಯಂತೆ. ನಮ್ಮವರು ಗ್ರೌಂಡ್ ಲೆವೆಲ್ಲಿನಲ್ಲೇ ಪಾರ್ಕಿಂಗ್ ಮಾಡಲು ಒದ್ದಾಡುತ್ತಾ, ಗುದ್ದಾಡುತ್ತಾ ದೊಡ್ಡ ದೊಡ್ಡ ಲೆವೆಲ್‌ವರೆಗೂ ಜಗಳಕ್ಕೆ ಹೋಗುವುದಿದೆ.

ಈಗಿನ ಕಾಲದಲ್ಲಿ ವಾಹನಗಳನ್ನು ಖರೀದಿಸುವುದು ದೊಡ್ಡದಲ್ಲ. ಬ್ಯಾಂಕುಗಳು ನಾಮುಂದು ತಾಮುಂದು ಎಂದು ಕರೆದು ಕರೆದು ಸಾಲ ಕೊಟ್ಟು ಖರೀದಿ ಮಾಡಬೇಕೆಂಬ ಮನುಷ್ಯನ ಆಸೆಗಳಿಗೆ ನೀರೆರೆದು ಪೋಷಿಸುತ್ತಿವೆ. ಸಾಲ ತೀರಿಸದಿದ್ದರೆ ವಾಹನಗಳನ್ನೇ ಜಪ್ತಿ ಮಾಡಿಕೊಳ್ಳುವ ನಿಯಮಗಳು ಇರುವುದರಿಂದ, ತಗೋ ಗಾಡಿ, ತಿರುಗಾಡಿ, ಮಜಾ ಮಾಡಿ, ಕಂತು ಕಟ್ಟುವುದಕ್ಕಾಗಲಿಲ್ಲವಾದರೆ ಬ್ಯಾಂಕಿನವರು 'ಬಿಡು ಗಾಡಿ' ಎಂದು ಬೀಗದ ಕೈ ತೆಗೆದುಕೊಂಡು ಬಿಡುಗಡೆ ಮಾಡುವ ತನಕವೂ ತನ್ನದೇ ಗಾಡಿ ಎಂದು ಬೀಗುವವರಿಗೂ ಅವುಗಳನ್ನು ಸಾಕುವಾಗ ಕಾಡುವ ಪ್ರಶ್ನೆ 'ಪಾರ್ಕಿಂಗ್ ಎಲ್ಲಿ ಮಾಡುವುದು' ಎಂದೇ.

ಪಾರ್ಕಿಂಗ್ ಪರದಾಟವನ್ನೆಲ್ಲ ಊಹಿಸಿಯೇ ದೇವಾನುದೇವತೆಗಳೆಲ್ಲ ಪ್ರಾಣಿಗಳನ್ನೇ ತಮ್ಮ ವಾಹನ ಮಾಡಿಕೊಂಡಿದ್ದಾರೆ ಎನಿಸುತ್ತದೆ. ಎಲ್ಲಿಗೆ ಕರೆದೊಯ್ದರೂ ಪಾರ್ಕಿಂಗ್ ಚಿಂತೆಯಿಲ್ಲ. ಅಲ್ಲಿಗೆ ಹೊತ್ತೊಯ್ದ ನಂತರ ಅವರ ಕೆಲಸವಾಗುವ ತನಕ ಎಲ್ಲಿಯಾದರೂ ಹೋಗಿ ಮೇಯುತ್ತಲೋ, ಬೇಟೆಯಾಡುತ್ತಲೋ, ಹಾರಾಡುತ್ತಲೋ ಕಾಲ ಕಳೆಯುತ್ತವೆ. ಹಾಗೆ ನೋಡಿದರೆ ತ್ರಿಲೋಕ ಸಂಚಾರಿ ನಾರದ, ಪ್ರಯಾಣಕ್ಕೆ ಯಾರ ಮೇಲೂ ಅವಲಂಬಿತವಾಗದೆ ತನ್ನ ನಟರಾಜ ಸರ್ವೀಸ್ ಒಂದನ್ನೇ ಗಟ್ಟಿಯಾಗಿ ನಂಬಿಕೊಂಡಿದ್ದಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in

